





ಹಾಕಿಕೊಂಡು ಬಣ್ಣ ಬಣ್ಣದ ಅಲಂಕಾರದಿಂದ ತುಂಬಿ ಪ್ರಾಣಿ, ಪಕ್ಷಿಗಳ ರೂಪ ತಳೆಯುತ್ತವೆ. ಇವುಗಳು ಮನೆಯ ಮುಂದೆ 'ಹ್ಯಾಂಗಿಂಗ್ ಗಾರ್ಡನ್' ಆಗಿ ಪರಿವರ್ತಿತವಾಗುತ್ತದೆ. ಗೋಡೆಯ ಮೇಲೆ ಪ್ಲಾಂಟ್ ಹೋಲ್ಡರ್ ರೀತಿಯಲ್ಲಿ ಬಳಕೆಯಾಗುತ್ತಿದೆ. ಬಾಟಲಿಯಿಂದ ತಯಾರಿಸಿದ ಪಾಟ್‌ಗಳು ಏಣಿ ಅಥವಾ ಬಾಲ್ಕನಿಯ ಗೋಡೆಗೆ ಆನಿಸಿದಾಗ ಅದು 'ವರ್ಟಿಕಲ್ ಗಾರ್ಡನ್' ಆಗಿಯೂ ಜೀವ ತಳೆಯುತ್ತವೆ.

ಪೈಂಟ್ ಡಬ್ಬ ಇದ್ದರೆ ಅದನ್ನು ಪ್ಲಾಂಟ್ ಹೋಲ್ಡರ್ ಮಾಡಬಹುದು. ಅದರ ಹೊರಭಾಗಕ್ಕೆ ಬಣ್ಣದ ಚಿತ್ತಾರ ಮಾಡಿ ಒಳಗೆ ಮಣ್ಣು ತುಂಬಿಸಿ ಗಿಡ ನೆಡಬಹುದು. ಅದು ಗಾರ್ಡನ್‌ಗೆ ಹೊಸ ಮೆರುಗು ನೀಡುತ್ತದೆ. ಅವುಗಳಲ್ಲಿ ನಾನಾ ರೀತಿಯ ಹೂವಿನ ಗಿಡ ನೆಟ್ಟರೆ ಹೂವುಗಳ ಜೊತೆಗೆ ಪಾಟ್ ಕೂಡ ಚಿತ್ತಾಕರ್ಷಕವಾಗುತ್ತದೆ.

ಬೆಳ್ತಂಗಡಿ ತಾಲ್ಲೂಕು ವೇಣೂರು ವಿದ್ಯೋದಯ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ನಿವೃತ್ತಿ ಹೊಂದಿದ ಶಶಿಪ್ರಭಾ ಡಿ.ಕೆ. ಅವರ ಕಲ್ಪನೆಯಲ್ಲಿ ನೂರಾರು ಖಾಲಿ ಬಾಟಲಿಗಳು ಹೂಕುಂಡಗಳಾಗಿ, ಅಲಂಕಾರಿ ವಸ್ತುಗಳಾಗಿ ಸಾಕಾರಗೊಂಡಿವೆ. ಹಾಗೆ ನೋಡಿದರೆ ಶಶಿಪ್ರಭಾ ಅವರಿಗೆ ಮೊದಲಿನಿಂದಲೂ ಕಲೆ, ಕ್ರಾಫ್ಟ್‌ಗಳಲ್ಲಿ ವಿಪರೀತ ಆಸಕ್ತಿ. ಗೊಂಬೆ ತಯಾರಿ, ಪೇಪರ್‌ನಿಂದ ವಿವಿಧ ವಸ್ತುಗಳ ತಯಾರಿ, ಕ್ಯಾಂಡಲ್ ಆರ್ಟ್ ಎಲ್ಲವೂ ಅವರಿಗೆ ಕರಗತ. ಶಾಲೆಯಲ್ಲಿ ಬಿಡುವಿನ ಸಮಯದಲ್ಲಿ ಮಕ್ಕಳಿಗೆ ಹೇಳಿಕೊಡುವುದು, ಮಹಿಳಾ ಮಂಡಳಿಗಳಲ್ಲಿ ಮಹಿಳೆಯರಿಗೆ ಏರ್ಪಡಿಸುವ ಕಲಾ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಅನುಭವ ಸಾಕಷ್ಟಿದೆ. ಇದಕ್ಕೆ ಶಾಲೆಯ ಹಿಂದಿನ ಮುಖ್ಯೋಪಾಧ್ಯಾಯಿನಿ ಶೀಲಾ ಎಸ್. ಹೆಗ್ಡೆ ಅವರ ಪ್ರೋತ್ಸಾಹವೂ ಇತ್ತು. ಈಗ ನಿವೃತ್ತಿಯ ನಂತರ ಅದೇ ಹವ್ಯಾಸ ಮುಂದುವರೆದಿದೆ. ಕೈಗೆ ಸಿಕ್ಕ ಖಾಲಿ ಪ್ಲಾಸ್ಟಿಕ್ ಬಾಟಲಿಗಳು ಆನೆಯಾಗಿ, ಗೊಂಬೆಯಾಗಿ, ಜಿಂಕೆ, ಮೊಲ, ನಾಯಿ, ಬೆಕ್ಕುಗಳಾಗಿ ನಾನಾ ಅವತಾರ ತಾಳುತ್ತವೆ. ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ಗಣಪ ಜನ್ಮತಾಳುತ್ತಾನೆ. ಬಣ್ಣ ಬಣ್ಣದ ಚಿತ್ತಾರ ಬರೆದ ಬಾಟಲಿಗಳು ಇಲಿಯ ಮುಖವೋ, ಆನೆಯ ಮುಖವೋ ರೂಪ ತಾಳಿ ಅತ್ಯಾಕರ್ಷಕವಾಗಿ ನೋಡುಗರನ್ನು ಸೆಳೆಯುತ್ತವೆ.

## ಎಷ್ಟೊಂದು ಬಾಟಲಿ, ಏನೆಲ್ಲ ರೂಪ!

ವಿವಿಧ ಗಾತ್ರದ ಪ್ಲಾಸ್ಟಿಕ್ ಬಾಟಲಿಗಳು ಕಲೆಯಾಗಿ ಅರಳಿದ್ದು ಹೇಗೆ? ಇದರ ಹಿನ್ನೆಲೆ ಏನು? ಶಶಿಪ್ರಭಾ ಅವರು ಹೇಳುವುದಿಷ್ಟು.

'ನಾನು ಮುಖ್ಯೋಪಾಧ್ಯಾಯಿನಿಯಾಗಿ ಆಗಷ್ಟೇ ನಿವೃತ್ತಿ ಹೊಂದಿದ್ದೆ. ಸ್ವಲ್ಪ ದಿನದಲ್ಲೇ ಕೊರೊನಾ ಬಂದು ಇಡೀ ಊರೇ ಲಾಕ್‌ಡೌನ್ ಆಯಿತು. ಶಾಲೆಗೆ ಹೋಗುತ್ತಲೇ ಇದ್ದ ನನಗೆ ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದೆಂದರೆ ಬೇಸರ. ಜೊತೆಗೆ ಸೋಂಕಿನ ನೆಪದಿಂದ ಮನೆಯಿಂದ ಹೊರಗೆ ಹೋಗಲೂ ಇಲ್ಲದ ಪರಿಸ್ಥಿತಿ.

ನಿವೃತ್ತಿಯಾದ ಮೇಲೆ ವೇಣೂರು ಮಹಿಳಾ ಮಂಡಳಿಯಲ್ಲಿ ಬೇಸಿಗೆ ಶಿಬಿರ ಇತ್ತು. ಮಂಡಳಿ ವತಿಯಿಂದ ಶೈಲಜಾ ಎಸ್. ಭಟ್, ಕಾಮೆಟ್ಟು ಅವರು ಮಕ್ಕಳಿಗೆ ಕ್ರಾಫ್ಟ್ ಹೇಳಿಕೊಡಬೇಕೆಂದು ಕರೆದರು. ಅಲ್ಲಿ ಮಕ್ಕಳಿಗೆ ನಿರುಪಯುಕ್ತ ವಸ್ತು ಬಳಸಿ ವಿವಿಧ ಅಲಂಕಾರಿಕ ಸಾಧನ ಮಾಡುವುದನ್ನು ಕಲಿಸಿದೆ. ಪೇಪರ್, ಐಸ್‌ಕ್ಯಾಂಡಿ ಕಡ್ಡಿ, ರಟ್ಟಿನ ಡಬ್ಬ, ಪ್ಲಾಸ್ಟಿಕ್ ಡಬ್ಬ, ಬಾಟಲಿ ಮುಂತಾದವುಗಳನ್ನು ಬಳಸಿ ಮನೆಯ ಒಳಾಂಗಣ ವಿನ್ಯಾಸಕ್ಕೆ ಸುಂದರವಾದ ಉತ್ಪನ್ನಗಳನ್ನು ಮಾಡಿದೆವು. ಎಲ್ಲರಿಗೂ ಖುಷಿಯಾಗಿತ್ತು.

ಅದಾಗಿ ಕೊರೊನಾ ಬಂದು ಮನೆಯಿಂದ ಹೊರಗೆ ಹೋಗಲಾಗದ ಪರಿಸ್ಥಿತಿ. ಆಗ ನನಗೆ ಕಟ್ಟಿಹಾಕಿದಂತಾಗಿತ್ತು. ಕ್ರಾಫ್ಟ್ ಮಾಡುವ ಹವ್ಯಾಸ ಇದ್ದೇ ಇತ್ತು. ಮನೆಯಲ್ಲಿ ರಾಶಿ ಬಿದ್ದಿದ್ದ ಪ್ಲಾಸ್ಟಿಕ್ ಬಾಟಲಿಗಳನ್ನೆಲ್ಲ ತೊಳೆದು ಸ್ವಚ್ಛ ಮಾಡಿ ಅದರಲ್ಲಿ ಹಲವು ರೀತಿಯ ಗೊಂಬೆಗಳು, ಹ್ಯಾಂಗಿಂಗ್ಸ್, ಗಿಡ ಬೆಳೆಸುವ ಅಲಂಕಾರಿಕ ಪಾಟ್‌ಗಳನ್ನು ಮಾಡಿದೆ. ಯಾರದೇ ನೆಂಟರ ಮನೆಗೆ ಹೋದರೂ ಖಾಲಿ ಬಾಟಲಿ ಹೆಕ್ಕಿ ತರುತ್ತಿದ್ದೆ. ಒಂದು ಮಾಡಿದಾಗ ಇನ್ನೊಂದು ಐಡಿಯ ಬರ್ತದೆ, ಹಾಗೆ ಮಾಡಿ ಮಾಡಿ ಸುಮಾರು ಐನೂರಕ್ಕೂ ಹೆಚ್ಚು ವಿಧದ ಬಾಟಲಿ ಕ್ರಾಫ್ಟ್ ಮಾಡಿದ್ದೇನೆ'.

ಇಷ್ಟೇ ಅಲ್ಲ. ಆಧುನಿಕ ಡಿಜಿಟಲ್ ಜಗತ್ತಿಗೂ ಆತುಕೊಂಡ ಈ ಶಿಕ್ಷಕಿ ಸಾಮಾಜಿಕ ಜಾಲತಾಣಗಳಲ್ಲಿ, ಯೂಟ್ಯೂಬ್‌ನಲ್ಲಿ ತಡಕಾಡಿ ಇನ್ನಷ್ಟು ಆಸಕ್ತಿಯ ಕಲೆಗಾರಿಕೆಯನ್ನು ಕಲಿತುಕೊಂಡಿದ್ದಾರೆ.

'ಯೂಟ್ಯೂಬ್ ವಿಡಿಯೊ ನೋಡಿ ಬಾಟಲಿಗಳಲ್ಲಿ ಮತ್ತಷ್ಟು ಹೊಸ ತರದ ವಿನ್ಯಾಸ ಮಾಡುವುದನ್ನು ಕಲಿತುಕೊಂಡೆ. ಒಂದು ಬಾಟಲಿ ಸಿಕ್ಕಿದ್ರೆ ಇದನ್ನು ಯಾವ ತರ ಮಾಡಬಹುದು ಎಂಬುದೇ ಯೋಚನೆ ಬರುತ್ತೆ. ಪಕ್ಷಿಗಳ, ಪ್ರಾಣಿಗಳ ವಿನ್ಯಾಸ ಮಕ್ಕಳಿಗೆ ಇಷ್ಟವಾಗುತ್ತದೆ. ಮೊಲ, ಬೆಕ್ಕು, ಚಿರತೆ, ನಾಯಿ, ಮೀನು, ಗಿಳಿ, ಕೊಕ್ಕರೆ ಮುಂತಾದ ಜೀವಿಗಳ ಚಿತ್ರಣ ಪ್ಲಾಸ್ಟಿಕ್‌ನಲ್ಲಿ ಒಡಮೂಡಿಸಿದಾಗ ಮಕ್ಕಳೂ ಖುಷಿ ಪಡುತ್ತಾರೆ. ಇವುಗಳಲ್ಲಿ ಗಿಡಗಳನ್ನು ಹಾಕಿ ಹ್ಯಾಂಗಿಂಗ್ ಗಾರ್ಡನ್ ಮಾಡಿದರೆ ಮನೆಯ ಹೊರಗೂ ಅಲಂಕಾರವಾಗಿರುತ್ತದೆ. ಹಳೆಯ ಪ್ಲಾಸ್ಟಿಕ್ ಕ್ಯಾನ್‌ಗಳನ್ನು ತಂದು ಅದನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಗಮ್ ಹಾಕಿ ಕಣ್ಣು ಮೂಗು ಬಾಯಿ ಚಿತ್ತಾರ ಮಾಡಿದರೆ ಸೊಗಸಾಗಿ ಕಾಣುತ್ತದೆ. ಇದರಲ್ಲಿ ತುಳಸಿ, ದೊಡ್ಡಪತ್ರೆ ಮುಂತಾದ ಗಿಡ ನೆಟ್ಟರೆ ಕಣ್ಣಿಗೂ ತಂಪು, ಮನಸ್ಸಿಗೂ ಆನಂದ'.

ಮರುಬಳಕೆ ಮತ್ತು ಸುಸ್ಥಿರತೆಯೇ ಭವಿಷ್ಯ. ಈ ಸತ್ಯ ಎಲ್ಲರಿಗೂ ಅರಿವಾಗಬೇಕು. ನೀರು ಕುಡಿದು ಮನೆ, ರಸ್ತೆ, ನದಿ, ಸಮುದ್ರ.. ಹೀಗೆ ಎಲ್ಲೆಂದರಲ್ಲಿ ಬಾಟಲಿ ಬಿಸಾಡಿ ಮಾಲಿನ್ಯ ಸೃಷ್ಟಿಸುವ ಬದಲು ಅದರಲ್ಲಿ ವಿಶಿಷ್ಟ ಕಲೆಗಾರಿಕೆ ಮಾಡಿ ಗಿಡ ನೆಟ್ಟರೆ ಮನೆಯ ಹೊರಾಂಗಣ ವಿನ್ಯಾಸವೂ ಸೊಗಸಾಗಿರುತ್ತದೆ. ಪ್ಲಾಸ್ಟಿಕ್‌ಗೆ ಮುಕ್ತಿ!.

(ಶಶಿಪ್ರಭಾ ಸಂಪರ್ಕ: 70222 22963)